KAGD410014482018

**ಹೆಚ್ಚುವರಿ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ರೋಣ**

**ಉಪಸ್ಥಿತರುಃ–ಶ್ರೀ. ವಿಜಯಕುಮಾರ್ ಎನ್, ಬಿ.ಎ., ಎಲ್‌ಎಲ್.ಬಿ**
ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ರೋಣ.

**ದಿನಾಂಕ 10 ನೇ ಜೂನ್ ಮಾಹೆಯ 2026 ನೇ ಇಸವಿ**

**ಅಸಲು ದಾವೆ ಸಂಖ್ಯೆ 32/2018**

**ವಾದಿ** – **ಹಾಲಪ್ಪ ತಂದೆ ಶಂಕ್ರಪ್ಪ ನಾಡಗೌಡ್ರ,**
ವಯಾಃ 65 ವರ್ಷ, ಉಃಶೇತ್ಕಿ
ಸಾಃ ಕುಕನೂರ, ಕಿಲ್ಲೆದ ಓಣಿ ,
ತಾಃಯಲಬುರ್ಗಾ, ಜಿಃ ಕೊಪ್ಪಳ.
**(ವಾದಿಯರ ಪರ ಶ್ರೀ. ವಿ.ಎಸ್.ಬಿ., ವಕೀಲರು)**

ವಿರುದ್ಧ

**ಪ್ರತಿವಾದಿಗಳು** – 1) **ಭೀಮನಗೌಡ ತಂದೆ ಹನಮಪ್ಪ ನಾಡಗೌಡ್ರ,**
ವಯಾಃ 70 ವರ್ಷ, ಉಃ ಶೇತ್ಕಿ
ಸಾಃ ಚಿಕ್ಕಮಣ್ಣೂರ, ತಾಃ ರೋಣ, ಜಿಃ ಗದಗ.

2) **ಚನ್ನಬಸಪ್ಪ ತಂದೆ ಹನಮಪ್ಪ ನಾಡಗೌಡ್ರ**
ವಯಾಃ 60 ವರ್ಷ ಉಃಶೇತ್ಕಿ
ಸಾಃ ಚಿಕ್ಕಮಣ್ಣೂರ, ತಾಃ ರೋಣ, ಜಿಃ ಗದಗ.

3) **ಶಂಕ್ರಪ್ಪ ತಂದೆ ಹನಮಪ್ಪ ನಾಡಗೌಡ್ರ**
ವಯಾಃ 60 ವರ್ಷ, ಉಃಶೇತ್ಕಿ
ಸಾಃ ಚಿಕ್ಕಮಣ್ಣೂರ, ತಾಃ ರೋಣ, ಜಿಃ ಗದಗ.

**( ಪ್ರತಿವಾದಿ ಪರ ಶ್ರೀ. ಕೆ.ಜಿ.ಯು., ವಕೀಲರು)**

| | | |
|---|---|---|
| ದಾವೆಯು ದಾಖಲಿಸಿದ ದಿನಾಂಕ | – | 25/01/2018 |
| ದಾವೆಯ ಸ್ವರೂಪ | – | ಘೋಷಣಾತ್ಮಕ ಮತ್ತು ಶಾಶ್ವತ ನಿರ್ಭಂದಕಾಜ್ಞೆಯ ಪರಿಹಾರವನ್ನು ಕೋರಿ ದಾವೆ. |
| ಸಾಕ್ಷಿಗಳ ವಿಚಾರಣೆ ಪ್ರಾರಂಭವಾದ ದಿನಾಂಕ | – | 31/08/2021 |
| ಸಾಕ್ಷಿಗಳ ವಿಚಾರಣೆ ಮುಕ್ತಾಯವಾದ ದಿನಾಂಕ | – | 13/02/2025 |
| ತೀರ್ಪು ನೀಡಿದ ದಿನಾಂಕ | – | 10/06/2026 |
| ಒಟ್ಟು ಅವಧಿ | – | ವರ್ಷ 08 ತಿಂಗಳು 05 ದಿನಗಳು 15 |

**ಹೆಚ್ಚುವರಿ ದಿವಾಣಿ ನ್ಯಾಯಧೀಶರು ಹಾಗೂ**
**ಜೆ.ಎಂ.ಎಫ್.ಸಿ., ರೋಣ.**

## <u>ತೀರ್ಪು</u>

ವಾದಿಯವರು ಪ್ರತಿವಾದಿಯವರ ವಿರುದ್ದ ಘೋಷಣಾತ್ಮಕ ಮತ್ತು ಶಾಶ್ವತ ನಿರ್ಭಂಧಕಾಜ್ಞೆಯ ಪರಿಹಾರವನ್ನು ಕೋರಿ ದಾವೆಯನ್ನು ಹೂಡಿರುತ್ತಾರೆ.

**2. <u>ದಾವಾ ಆಸ್ತಿಯ ವರ್ಣನೆ :</u>**

ದಾವಾ ಆಸ್ತಿಯು ರೋಣ ತಾಲೂಕು ಚಿಕ್ಕಮಣ್ಣೂರ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಚಿಕ್ಕಮಣ್ಣೂರ ಗ್ರಾಮದ ಮನೆ ನಂ. 31 ಹಾಗೂ ಖಾಲಿ ಹಿತ್ತಲ ಜಾಗ ನಂ. 216 ದಾವಾ ಆಸ್ತಿಗಳಾಗಿರುತ್ತವೆ.

**3. <u>ವಾದಿಯವರ ವಾದಪತ್ರದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತಿದೆ :</u>**

ವಾದಿಯು ತಮ್ಮ ವಾದ ಪತ್ರದಲ್ಲಿ ದಾವಾ ಅನೂಸೂಚಿ ಸ್ವತ್ತು ಮನೆ ಮತ್ತು ಖಾಲಿ ಜಾಗವು ವಾದಿಯ ತಂದೆಯವರಾದ ಶಂಕ್ರಪ್ಪ ಶಿವನಪ್ಪ ನಾಡಗೌಡ್ರ ಎಂಬುವವರಿಗೆ ಸೇರಿದ ಆಸ್ತಿಗಳಾಗಿರುತ್ತವೆ. ಇವರು 1964-65 ರಲ್ಲಿ ಮೃತರಾಗಿರುತ್ತಾರೆ. ಸದರಿ ದಾವಾ ಆಸ್ತಿಗಳನ್ನು ಯಾವುದೇ ಮಾರಾಟ ಮತ್ತು ಅಡಮಾನವನ್ನು ಮಾಡಿರುವುದಿಲ್ಲ. ಸದರಿ ದಾವಾದ ವಾದಿ ಹಾಲಪ್ಪ ಶಂಕ್ರಪ್ಪ ನಾಡಗೌಡ್ರ ಇವರು ಶಂಕ್ರಪ್ಪ ಶಿವನಪ್ಪ ನಾಡಗೌಡ್ರ ಇವರ ಮಗನಾಗಿರುತ್ತಾರೆ. ಸದರಿ ದಾವಾದ ಪ್ರತಿವಾದಿಗಳು ದಾವಾ ಆಸ್ತಿಗಳಿಗೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇರುವುದಿಲ್ಲ. ಸದರಿ ದಾವಾದ ವಾದಿ ಹಾಲಪ್ಪ ಶಂಕ್ರಪ್ಪ ನಾಡಗೌಡ್ರ ಇವರು 1 ವರ್ಷದ ಬಾಲಕನಿದ್ದಾಗ ತಾಯಿ ತೀರಿಕೊಂಡಿರುತ್ತಾರೆ. 12-13 ವರ್ಷದ ಬಾಲಕನಿದ್ದಾಗ ತಂದೆ ಶಂಕ್ರಪ್ಪ ಶಿವನಪ್ಪ ನಾಡಗೌಡ್ರ ತೀರಿಕೊಂಡಿರುತ್ತಾರೆ. ಆಗ ವಾದಿ ಒಬ್ಬಂಟಿಗನಾದ, ಅಂದಿನಿಂದ ವಾದಿ ಮನೆ ಬಿಟ್ಟು, ಊರುಬಿಟ್ಟು ದೇಶಾಂತರ ಕೂಲಿ ಮಾಡಲು ಹೋಗಿರುತ್ತಾರೆ. ವಾದಿಯ ತಂದೆ ಮೃತ ಶಂಕ್ರಪ್ಪ ಶಿವನಪ್ಪ ನಾಡಗೌಡ್ರ ಹಾಗೂ ವಾದಿ ಹಾಲಪ್ಪ ಶಂಕ್ರಪ್ಪ ನಾಡಗೌಡ್ರ ಇವರು ದಾವಾ ಆಸ್ತಿಗಳನ್ನು ಎಂದಿಗೂ ಕೂಡಾ ಯಾರಿಗೂ ಯಾವುದೇ

ರೀತಿಯಿಂದ ಮಾರಾಟ ಮಾಡಿರುವುದಿಲ್ಲ. 1 ರಿಂದ 3 ನೇ ಪ್ರತಿವಾದಿಯವರು ದಾವಾ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ಹಾಗೂ ವಾದಿಗೆ ಮೋಸ ಮಾಡುವ ಉದ್ದೇಶದಿಂದ ಪಂಚಾಯತಿ ಅಧಿಕಾರಿಗಳೊಂದಿಗೆ ಸೇರಿಕೊಂಡು ಕಾನೂನು ಬಾಹಿರವಾಗಿ ದಾವಾ ಆಸ್ತಿಗಳ ಹಕ್ಕಿನ ಪತ್ರಿಕೆಗಳಲ್ಲಿ ತಮ್ಮ ಹೆಸರು ದಾಖಲು ಮಾಡಿರುತ್ತಾರೆ. ಪ್ರತಿವಾದಿಯವರಿಗೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇರುವುದಿಲ್ಲ. ದಾವಾ ಆಸ್ತಿಗಳು ತಮ್ಮ ಪಿತ್ರಾರ್ಜಿತ ಅಸ್ತಿಗಳಾಗಿರುತ್ತವೆ, ಮಾಲೀಕರು ಮತ್ತು ಮಾಲ್ಕಿ ಹಕ್ಕು ತಮ್ಮದೆ ಇರುತ್ತದೆ. ದಾವಾ ಆಸ್ತಿಗಳ ಮೇಲೆ ಯಾವುದಾದರು ವ್ಯವಹಾರ ಆಗಿದೆಯೇ ಎಂಬುದರ ಕುರಿತು ತಿಳಿದುಕೊಳ್ಳುವ ಸಲುವಾಗಿ ಉಪನೋಂದಣಾಧಿಕಾರಿ ರೋಣ ಇವರಿಗೆ ಅರ್ಜಿ ಸಲ್ಲಿಸಿದಾಗ ದಿನಾಂಕ 01.04.1950 ರಿಂದ ಡಿಸೆಂಬರ್ 2017 ರವರೆಗೆ ದಾವಾ ಆಸ್ತಿಗಳ ಕುರಿತು ವರ್ಗಾವಣೆ ಮತ್ತು ಪರಾಧಿನತೆಯ ಕುರಿತು ಹಾಗೂ ಋಣಭಾರ ರಾಹಿತ್ಯ ಪ್ರಮಾಣ ಪತ್ರ ಒದಗಿಸಲು ಅರ್ಜಿ ಸಲ್ಲಿಸಲಾಗಿ ಉಪನೋಂದಣಾಧಿಕಾರಿ ರೋಣ ಇವರು ದಿನಾಂಕ 10.10.2017 ಹಾಗೂ 01.01.2018 ರಂದು ಸ್ವತ್ತಿನ ಮೇಲೆ ಋಣಬಾರ ಪ್ರಮಾಣಪತ್ರ ನೀಡಿರುತ್ತಾರೆ. ಸದರಿ ಪ್ರಮಾಣ ಪತ್ರದಲ್ಲಿ ತಿಳಿಸಿದ ಹಾಗೆ ದಾವಾ ಆಸ್ತಿಯ ಕುರಿತು ಯಾವುದೇ ಋಣಬಾರ ಮತ್ತು ನಡುವಳಿಕೆ ಕಂಡು ಬಂದಿರುವುದಿಲ್ಲ. ಆದ್ದರಿಂದ ಪ್ರತಿವಾದಿಯವರು ನಕಲಿ ದಾಖಲಾತಿಗಳನ್ನು ಸೃಷ್ಟಿಸಿಕೊಂಡು ಪಂಚಾಯತಿ ಅಧಿಕಾರಿಗಳೊಂದಿಗೆ ಸೇರಿಕೊಂಡು ದಾವಾ ಆಸ್ತಿಯ ಹಕ್ಕಿನ ಪತ್ರಿಕೆಯಲ್ಲಿ ತಮ್ಮ ಹೆಸರನ್ನು ದಾಖಲು ಮಾಡಿಕೊಂಡಿರುವುದು

ಕಾನೂನುಬಾಹಿರವಾಗಿರುವದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ವಾದಿಯವರು ಪ್ರತಿವಾದಿಯವರನ್ನು ಭೇಟಿಯಾಗಿ ದಾವಾ ಆಸ್ತಿಗಳನ್ನು ಬಿಟ್ಟುಕೊಡಲು ಕೇಳಿದಾಗ ಪ್ರತಿವಾದಿಯವರು ಈ ದಾವಾ ಆಸ್ತಿಗಳು ತಮ್ಮದು, ಪಂಚಾಯತಿ ಉತಾರದಲ್ಲಿ ದಾಖಲಾಗಿರುವ ತಮ್ಮ ಹೆಸರನ್ನು ತೆಗೆಯುವುದಿಲ್ಲ ಎಂದು ನಿರಾಕರಿಸಿರುತ್ತಾರೆ. ಹಾಗಾಗಿ ವಾದಿಯವರಿಗೆ ದಾವಾ ಸ್ವತ್ತಿನ ಸ್ವಾಧೀನವನ್ನು ಕೊಡಿಸಬೇಕು ಮತ್ತು ದಾವಾ ಆಸ್ತಿಯ ಮಾಲೀಕರು ಎಂದು ಘೋಷಣೆ ಮಾಡಬೇಕಂದು ಕೋರಿ ಕೊಂಡಿರುತ್ತಾರೆ.

**4.** ವಾದಿಯವರು ಸಲ್ಲಿಸಿದ್ದ ವಾದ ಪತ್ರದ ಮೂಲಕ ಪ್ರತಿವಾದಿಯವರ ವಿರುದ್ಧ ದಾವೆಯನ್ನು ದಾಖಲು ಮಾಡಿಕೊಂಡು ಪ್ರತಿವಾದಿಯವರಿಗೆ ದಾವಾ ಸಮನ್ಸ್ ಖುದ್ದು ಜಾರಿಯಾಗಿರುತ್ತದೆ. ಅದರ ಪ್ರಕಾರವಾಗಿ 1 ನೇ ಪ್ರತಿವಾದಿಯು ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ. 2 ಮತ್ತು 3 ನೇ ಪ್ರತಿವಾದಿಯವರು 1 ನೇ ಪ್ರತಿವಾದಿಯವರ ಪ್ರತಿವಾದ ಪತ್ರವನ್ನು ತಮ್ಮ ಪರವಾಗಿ ಅಳವಡಿಸಿಕೊಂಡಿರುತ್ತಾರೆ.

**5.** 1 ನೇ ಪ್ರತಿವಾದಿಯು ವಾದ ಪತ್ರದಲ್ಲಿ ಹೇಳಿರುವ ಎಲ್ಲಾ ಸಂಗತಿಗಳನ್ನು ಸ್ಪಷ್ಟವಾಗಿ ಅಲ್ಲಗಳೆದಿರುತ್ತಾರೆ. ಮುಂದುವರಿದು ವಾದಿಯು 1974 ನೇ ಸಾಲಿನಲ್ಲಿ ಅಂದಾಜು 28 ವರ್ಷ ವಯಸ್ಕನಾಗಿರುತ್ತಾರೆ ಮತ್ತು ದಾವಾದ ಆಸ್ತಿಯ ಮಾಲೀಕನಾಗಿರುತ್ತಾರೆ. ವಾದಿಯು 1974 ರ ಕ್ಕಿಂತ ಮೊದಲಿನಿಂದ ಕೌಜಗೇರಿ ಗ್ರಾಮದಲ್ಲಿ ವಾಸ ಮಾಡುತ್ತಿದ್ದಾರೆ. ದಾವಾದ ಆಸ್ತಿಯನ್ನು ವಾದಿಗೆ ಹಣದ ಅವಶಕತೆ ಇದ್ದಿದರಿಂದ ಮಾರಾಟ ಮಾಡಿ ತಾನು ವಾಸವಿದ್ದ

ಸ್ಥಳದಲ್ಲಿ ಅಸ್ತಿ ಖರೀದಿ ಮಾಡುವ ಉದ್ದೇಶದಿಂದ ಹಣದ ಅವಶ್ಯಕವಾಗಿ ದಾವಾದ ಆಸ್ತಿಯನ್ನು ದಿನಾಂಕ 26.03.1974 ರಂದು ರೂ.1,000/- ಗಳಿಗೆ 1 ನೇ ಪ್ರತಿವಾದಿಗೆ ಖರೀದಿಗೆ ಕೊಟ್ಟಿರುತ್ತಾರೆ. ನೊಂದಣಿ ಅಧಿಕಾರಿಗಳ ಸಮಕ್ಷಮ ಹಣ ಪಡೆದುಕೊಂಡು ನೊಂದಾಯಿತ ಖರೀದಿ ಪತ್ರವನ್ನು 1 ನೇ ಪ್ರತಿವಾದಿಯವರ ಹೆಸರಲ್ಲಿ ಬರೆದುಕೊಟ್ಟು ದಾವಾದ ಆಸ್ತಿಯನ್ನು 1 ನೇ ಪ್ರತಿವಾದಿಗೆ ಸ್ವಾಧೀನವನ್ನು ಬಿಟ್ಟುಕೊಟ್ಟಿರುತ್ತಾರೆ. ಅಂದಿನಿಂದ ದಾವಾದ ಆಸ್ತಿಗಳಿಗೆ 1 ನೇ ಪ್ರತಿವಾದಿ ಸಂಪೂರ್ಣ ಮಾಲೀಕರಾಗಿ ಸ್ವಾಧೀನದಲ್ಲಿ ಇರುತ್ತಾರೆ. ಪಂಚಾಯತಿಯಲ್ಲಿ ದಾವಾದ ಆಸ್ತಿಗೆ 1 ನೇ ಪ್ರತಿವಾದಿಯ ಹೆಸರು ಖರೀದಿ ಪತ್ರದನ್ವಯ ದಾಖಲಾಗಿರುತ್ತದೆ ಹಾಗೂ ಸದರಿ ಆಸ್ತಿ ಪದರತಿವಾದಿಯವರ ಸ್ವಾಧೀನದಲ್ಲಿ ಇರುತ್ತದೆ. 2 ಮತ್ತು 3 ನೇ ಪ್ರತಿವಾದಿಯವರು 1 ನೇ ಪ್ರತಿವಾದಿಯ ಸಹೋದರರಾಗಿರುತ್ತಾರೆ. ಸದರಿ ದಾವಾದ ಆಸ್ತಿಯಲ್ಲಿ ಇದ್ದ ಹಳೇ ಮನೆಯನ್ನು ಪ್ರತಿವಾದಿಯವರು ಬಿಚ್ಚಿಸಿ 2-3 ಲಕ್ಷ ಖರ್ಚು ಮಾಡಿ ಹೊಸ ಮನೆಯನ್ನು ಕಟ್ಟಿಸಿರುತ್ತಾರೆ. ಅದನ್ನು ಸಹಿಸದ ಹಾಗೂ ಪ್ರತಿವಾದಿಯವರಿಗೆ ಆಗದವರ ಮಾತನ್ನು ಕೇಳಿ ವಾದಿ ತಾನು ಸ್ವತಃ ಬರೆದುಕೊಟ್ಟರು ಸಹ ಸುಳ್ಳು ಸಂಗತಿ ಕಾಣಿಸಿ ಈ ಸುಳ್ಳು ಸ್ವರೂಪದ ದಾವೆಯನ್ನು ಹೂಡಿರುತ್ತಾರೆ. ಆದ್ದರಿಂದ ವಾದಿಯ ಈ ದಾವೆಯನ್ನು ಖರ್ಚು ಸಹಿತ ವಜಾ ಮಾಡಬೇಕೆಂದು ಕೇಳಿಕೊಂಡಿರುತ್ತಾರೆ.

**6.** ವಾದ ಪತ್ರ ಮತ್ತು ಪ್ರತಿವಾದ ಪತ್ರವನ್ನು ಪರಿಶೀಲಿಸಿ ಹಿಂದಿನ ಅಧಿಕಾರಿಗಳು ಈ ಕೆಳಕಂಡ ವಿವಾದಾಂಶಗಳನ್ನು ರಚಿಸಿರುತ್ತಾರೆ.

**ISSUES**

1. Whether the plaintiff proves that, he is the absolute owner in possession of the suit schedule property?

2. Whether the plaintiff proves that, the alleged interference by the defendants over the plaint schedule property?

3. Whether the plaintiff is entitled for the relief of declaration prayed for?

4. Whether the plaintiff is entitled for the relief of permanent injunction as prayed for?

5. Whether the suit of the plaintiff is barred by limitation?

6. What order or decree?

**ವಿವಾದಾಂಶಗಳು**

**1. ವಾದಿಯವರು ದಾವಾ ಆಸ್ತಿಯ ಸಂಪೂರ್ಣ ಮಾಲೀಕರಾಗಿದ್ದುಕೊಂಡು ಸ್ವಾಧೀನದಲ್ಲಿ ಇರುತ್ತೇವೆ ಎಂದು ಸಾಬೀತುಪಡಿಸುತ್ತಾರೆಯೇ?**

**2. ವಾದಿಯವರ ದಾವಾ ಆಸ್ತಿಯ ಮೇಲೆ ಪ್ರತಿವಾದಿಯವರು ವಾದಿಯವರಿಗೆ ತೊಂದರೆ ನೀಡುತ್ತಿದ್ದಾರೆ ಎಂದು ವಾದಿಯವರು ಸಾಬೀತುಪಡಿಸುತ್ತಾರೇಯೇ?**

**3. ವಾದಿಯವರು ತಮ್ಮ ವಾದ ಪತ್ರದಲ್ಲಿ ಕೇಳಿರುವಂತೆ ಘೋಷಣಾತ್ಮಕ ಪರಿಹಾರವನ್ನು ಪಡೆದುಕೊಳ್ಳಲು ಅರ್ಹರೇ?**

**4. ವಾದಿಯವರು ತಮ್ಮ ವಾದ ಪತ್ರದಲ್ಲಿ ಕೇಳಿದಂತೆ ಶಾಶ್ವತ ನಿರ್ಭಂದಕಾಜ್ಞೆಯ ಪರಿಹಾರವನ್ನು ಪಡೆದುಕೊಳ್ಳಲು ಅರ್ಹರೇ?**

**5. ಪ್ರಸ್ತುತ ದಾವೆಯು ಕಾಲಪರಿಮಿತಿ ಅಧಿನಿಯಮದ ಅಡಿಯಲ್ಲಿ ಪರಿಷೇದಿತವಾಗಿದೆ ಎಂದು ಪ್ರತಿವಾದಿಯವರು ಸಾಬೀತುಪಡಿಸುತ್ತಾರೇಯೇ?**

**6. ಯಾವ ಆದೇಶ ಅಥವಾ ಯಾವ ಡಿಕ್ರಿ ?**

**7.** ವಾದಿಯು ತಮ್ಮ ದಾವೆಯನ್ನು ಸಾಬೀತುಪಡಿಸಲು ತನ್ನನ್ನು ತಾನು ವಾದಿ ಸಾಕ್ಷಿ 1 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ. ವಾದಿಯು ತನ್ನ ಮುಖ್ಯ ವಿಚಾರಣೆಯ ಬದಲಿಗೆ ಸಾಕ್ಷ್ಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಮೌಖಿಕ ಸಾಕ್ಷ್ಯದ ಸಮರ್ಥನೆಗಾಗಿ ದಾಖಲಾತಿಗಳನ್ನು ಹಾಜರುಪಡಿಸಿದ್ದು. ಅವುಗಳನ್ನು ನಿಪಿ 1 ರಿಂದ 14 ಎಂದು ಗುರುತಿಸಿಕೊಂಡಿರುತ್ತಾರೆ. 2 ನೇ ಪ್ರತಿವಾದಿಯ ಮಗನು ತಮ್ಮ ತಂದೆಯ ಅಧಿಕಾರ ಪತ್ರವನ್ನು ಹಾಜರುಪಡಿಸಿ ತನ್ನನ್ನು ತಾನು ಪ್ರತಿವಾದಿ ಸಾಕ್ಷಿ 1 ಎಂದು ವಿಚಾರಣೆಗೆ ಒಳಪಡಿಸಿಕೊಂಡಿರುತ್ತಾರೆ. 2 ನೇ ಪ್ರತಿವಾದಿಯು ತನ್ನ ಮುಖ್ಯ ವಿಚಾರಣೆಯ ಬದಲಿಗೆ ಸಾಕ್ಷ್ಯ

ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಮೌಖಿಕ ಸಾಕ್ಷ್ಯದ ಸಮರ್ಥನೆಗಾಗಿ ದಾಖಲಾತಿಗಳನ್ನು ಹಾಜರುಪಡಿಸಿದ್ದು. ಅವುಗಳನ್ನು ನಿಡಿ1 ರಿಂದ 6 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

8. ವಾದಿ ಮತ್ತು ಪ್ರತಿವಾದಿಯವರು ವಾದವನ್ನು ಆಲಿಸಲಾಯಿತು ಮತ್ತು ನ್ಯಾಯಾಲಯದ ಸಮ್ಮುಖದಲ್ಲಿರುವ ದಾಖಲಾತಿಗಳನ್ನು ಪರಿಶೀಲಿಸಲಾಯಿತು.

9. ವಾದಿ ಮತ್ತು ಪ್ರತಿವಾದಿ ಹಾಜರುಪಡಿಸಿದ ವಾದಪತ್ರ ಮತ್ತು ವಿಚಾರಣೆಗೆ ಹಾಜರುಪಡಿಸಿದ ಸಾಕ್ಷ್ಯದಾರರನ್ನು ಮತ್ತು ಗುರುತಿಸಿಕೊಂಡ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ಈ ಮೇಲ್ಕಂಡ ವಿವಾದಾಂಶಗಳನ್ನು ಈ ಕೆಳಕಂಡಂತೆ ಉತ್ತರಿಸುತ್ತಿದ್ದೇನೆ.

**ವಿವಾದಾಂಶ ಸಂಖ್ಯೆ 1 : ನಕಾರಾತ್ಮಕವಾಗಿ**

**ವಿವಾದಾಂಶ ಸಂಖ್ಯೆ 2 : ನಕಾರಾತ್ಮಕವಾಗಿ**

**ವಿವಾದಾಂಶ ಸಂಖ್ಯೆ 3 : ನಕಾರಾತ್ಮಕವಾಗಿ**

**ವಿವಾದಾಂಶ ಸಂಖ್ಯೆ 4 : ನಕಾರಾತ್ಮಕವಾಗಿ**

**ವಿವಾದಾಂಶ ಸಂಖ್ಯೆ 5 : ಸಕಾರಾತ್ಮಕವಾಗಿ**

**ವಿವಾದಾಂಶ ಸಂಖ್ಯೆ 6 : ಈ ಕೆಳಕಂಡ ಕಾರಣಗಳಿಗಾಗಿ ಅಂತಿಮ ಆದೇಶದಂತೆ.**

## ಕಾರಣಗಳು

10. **ವಿವಾದಾಂಶ ಸಂಖ್ಯೆ 1** ಪ್ರಸ್ತುತ ವಿವಾದಾಂಶಕ್ಕೆ ಸಂಬಂಧಿಸಿದಂತೆ ವಾದಿಯವರು ತಾನು ದಾವಾ ಆಸ್ತಿಯ ಮಾಲೀಕನಾಗಿರುತ್ತೇನೆ ಎಂದು ಹೇಳಿರುತ್ತಾರೆ. ಹಾಗಾಗಿ ಸದರಿ ವಿವಾದಾಂಶವನ್ನು ಸಾಬೀತುಪಡಿಸುವ ಹೊಣೆಗಾರಿಕೆ ವಾದಿಯವರ ಮೇಲೆ ಇರುತ್ತದೆ. ವಾದಿಯವರು ಸದರಿ ವಿವಾದಾಂಶಕ್ಕೆ ಸಂಬಂಧಿಸಿದಂತೆ ತಮ್ಮ ವಾದ ಪತ್ರದಲ್ಲಿ ತನ್ನ ತಂದೆಯವರು 1964-65 ರಲ್ಲಿ ನಿಧನರಾಗಿರುತ್ತಾರೆ. ಆ ಸಮಯದಲ್ಲಿ ತನಗೆ 12-13 ವರ್ಷ ಇರುತ್ತವೆ. ತನ್ನ ತಂದೆಯವರು ಹಾಗೂ ತಾನು ದಾವಾ ಆಸ್ತಿಗಳನ್ನು ಎಂದಿಗೂ ಕೂಡಾ ಯಾರಿಗೂ ಯಾವುದೇ ರೀತಿಯಿಂದ ಮಾರಾಟ ಮಾಡಿರುವುದಿಲ್ಲ. ಪ್ರತಿವಾದಿ ಸಂಖ್ಯೆ 1 ರಿಂದ 3 ರವರು ದಾವಾ ಆಸ್ತಿಗಳನ್ನು ಕಬಳಸುವ ಉದ್ದೇಶದಿಂದ ಹಾಗೂ ವಾದಿಗೆ ಮೋಸ ಮಾಡುವ ಉದ್ದೇಶದಿಂದ ಪಂಚಾಯತಿ ಅಧಿಕಾರಿಗಳೊಂದಿಗೆ ಸೇರಿಕೊಂಡು ಕಾನೂನುಬಾಹಿರವಾಗಿ ದಾವಾ ಆಸ್ತಿಗಳ ಹಕ್ಕು ಪತ್ರಗಳನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ. ಪ್ರತಿವಾದಿಯವರಿಗೆ ದಾವಾ ಆಸ್ತಿಯ ಮೇಲೆ ಹಕ್ಕು ಹಿತಾಸಕ್ತಿ ಇರುವುದಿಲ್ಲ. ವಾದಿಯವರು ದಾವಾ ಆಸ್ತಿಯ ಮಾಲೀಕರಾಗಿರುತ್ತಾರೆ ಎಂದು ಹೇಳಿರುತ್ತಾರೆ. ಸದರಿ ವಿವಾದಾಂಶವನ್ನು ಸಾಬೀತುಪಡಿಸುವ ನಿಟ್ಟಿನಲ್ಲಿ ತನ್ನನ್ನು ತಾನು ವಾದಿ ಸಾಕ್ಷಿ 1 ಎಂದು ವಿಚಾರಣೆಗೆ ಒಳಪಡಿಸಿಕೊಂಡಿದ್ದು, ನಿಪಿ.1 ರಿಂದ 14 ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ. ಹಾಗೆಯೇ ಪ್ರತಿವಾದಿಯವರ ಪರವಾಗಿ ಅಧಿಕಾರ ಪತ್ರವನ್ನು ಪಡೆದುಕೊಂಡಂತಹ

ಮಲ್ಲನಗೌಡ ನಾಡಗೌಡರು ಪ್ರತಿವಾದಿ ಸಾಕ್ಷ್ಯಿ 1 ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಮೌಖಿಕ ಸಾಕ್ಷ್ಯದ ಸರ್ಮಥನೆಗಾಗಿ ನಿಡಿ.1 ರಿಂದ 6 ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ.

**11.** ವಾದಿಯವರು ಪ್ರಸ್ತುತ ವಿವಾದಾಂಶಕ್ಕೆ ಸಂಬಂಧಿಸಿದಂತೆ ಹಾಜರುಪಡಿಸಿರುವ ದಾಖಲಾತಿಗಳ ಪೈಕಿ ನಿಪಿ.1 ರಿಂದ 3 ಸ್ವತ್ತಿನ ಮೇಲೆ ಋಣಭಾರ ರಾಹಿತ್ಯ ಪ್ರಮಾಣ ಪತ್ರದ ಹಿಂಬರಹಗಳು ಆಗಿರುತ್ತವೆ. ನಿಪಿ.4 ರಿಂದ 11, 13 ಮತ್ತು 14 ವಿಪಿಸಿ ನಂ.203, 31, 219, 216, 212 ಗಳಿಗೆ ಸಂಬಂಧಿಸಿದ ಮನೆ ಆಕಾರಣೆಯಾದಿಗಳು ಆಗಿರುತ್ತವೆ. ನಿಪಿ.12 ಗ್ರಾಮ ಪಂಚಾಯತ ಕಾರ್ಯಾಲಯ ಚಿಕ್ಕಮಣ್ಣೂರು ರವರು ನೀಡಿರುವ ದೃಢಿಕರಣ ಪತ್ರವಾಗಿರುತ್ತದೆ. ಪ್ರತಿವಾದಿಯವರು ಸಹ ತಮ್ಮ ಪರವಾಗಿ ಹಾಜರುಪಡಿಸಿಕೊಂಡಿರುವ ದಾಖಲಾತಿಗಳ ಪೈಕಿ ನಿಡಿ.1 ವಿಶೇಷ ಅಧಿಕಾರ ಪತ್ರ, ನಿಡಿ.2 ಖರೀದಿ ಪತ್ರ, ನಿಡಿ.3 ರಿಂದ 6 ವಿಪಿಸಿ ನಂ.31 ಮತ್ತು 211 ಕ್ಕೆ ಸಂಬಂಧಿಸಿದ ಮನೆಯ ಆಕಾರಣೆಯಾದಿಗಳು ಆಗಿರುತ್ತವೆ.

**12.** ವಾದಿ ಸಾಕ್ಷ್ಯಿ 1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಮ್ಮ ವಾದ ಪತ್ರದಲ್ಲಿ ಹೇಳಿರುವ ಸಂಗತಿಗಳನ್ನು ಪುನರುಚ್ಚರಿಸಿರುತ್ತಾರೆ. ವಾದಿಯವರು ಪ್ರಸ್ತುತ ವಿವಾದಾಂಶಕ್ಕೆ ಸಂಬಂಧಿಸಿದಂತೆ ಹಾಜರುಪಡಿಸಿರುವ ದಾಖಲಾತಿಗಳನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ ನಿಪಿ.1 ಉಪನೊಂದಣಾಧಿಕಾರಿ ರವರ ಕಾರ್ಯಾಲಯ ರೋಣ ರವರಲ್ಲಿ ವಿಪಿಸಿ ನಂ.31 ಮತ್ತು ಹಿತ್ತಲು ಜಾಗದ ಸಂಖ್ಯೆ 203 ಕ್ಕೆ ಸಂಬಂಧಿಸಿದಂತೆ ದಿನಾಂಕ 01.04.1950 ರಿಂದ

31.03.1986 ರ ವರೆಗಿನ ನೊಂದಾಯಿತ ಪತ್ರಗಳು ಮತ್ತು ಋಣಭಾರ ಇದ್ದಲ್ಲಿ ವಿವರಗಳನ್ನು ನೀಡುವಂತೆ ಕೇಳಿಕೊಂಡಿರುತ್ತಾರೆ. ಉಪನೊಂದಣಾಧಿಕಾರಿಯವರು ಶೋಧನೆ ಮಾಡಿದಾಗ ಯಾವುದೇ ನಡುವಳಿಕೆ ಅಥವಾ ಋಣಭಾರ ಕಂಡು ಬಂದಿರುವುದಿಲ್ಲ ಎಂದು ಹಿಂಬರಹವನ್ನು ನೀಡಿರುತ್ತಾರೆ. ಹಾಗೆಯೇ ನಿಪಿ.2 ಸಹ ವಿಪಿಸಿ ನಂ.31 ಕ್ಕೆ ಸಂಬಂಧಿಸಿದ ಸ್ವತ್ತಿನ ಮೇಲೆ ಋಣಭಾರ ರಾಹಿತ್ಯ ಪ್ರಮಾಣಪತ್ರವಾಗಿದ್ದು, ಸದರಿ ನಿಪಿ2 ರಲ್ಲಿಯು ಸಹ ಯಾವುದೇ ಋಣಭಾರ ಕಂಡು ಬಂದಿರುವುದಿಲ್ಲ ಎಂದು ನಮೂದಿಸಿರುತ್ತಾರೆ. ಅದೇ ರೀತಿಯಾಗಿ ನಿಪಿ.3 ವಿಪಿಸಿ ನಂ. 203 ರ ಸ್ವತ್ತಿನ ಮೇಲೆ ಋಣಭಾರ ರಾಹಿತ್ಯ ಪ್ರಮಾಣಪತ್ರವಾಗಿದ್ದು, ನಿಪಿ.3 ರಲ್ಲಿಯು ಸಹ ಯಾವುದೇ ಋಣಭಾರ ಕಂಡು ಬಂದಿರುವುದಿಲ್ಲ ಎಂದು ನಮೂದಿಸಿರುತ್ತಾರೆ. ನಿಪಿ.4 ವಿಪಿಸಿ ನಂ.203 ರ ಮನೆ ಆಕಾರಣೆಯಾದಿಯಾಗಿದ್ದು, ಸದರಿ ದಾಖಲೆಯು 1961-62 ನೇ ಸಾಲಿನದಾಗಿದ್ದು, ಸದರಿ ದಾಖಲಾತಿಯಲ್ಲಿ ವಾದಿಯವರ ತಂದೆಯವರ ಹೆಸರು ನಮೂದು ಆಗಿರುತ್ತದೆ. ನಿಪಿ.5 ವಿಪಿಸಿ ನಂ. 31 ಕ್ಕೆ ಸಂಬಂಧಿಸಿದ ಮನೆ ಆಕಾರಣೆಯಾದಿಯಾಗಿದ್ದು, ಸದರಿ ದಾಖಲೆಯು 1972-73 ನೇ ಸಾಲಿನದಾಗಿದ್ದು, ಸದರಿ ದಾಖಲಾತಿಯಲ್ಲಿ ಹಾಲಪ್ಪ ಶಂಕ್ರಪ್ಪ ನಾಡಗೌಡರು ಮತ್ತು ಭೀಮನಗೌಡ ಹನಮಪ್ಪ ನಾಡಗೌಡರು ಎಂದು ನಮೂದು ಆಗಿರುತ್ತದೆ. ನಿಪಿ.6 ವಿಪಿಸಿ ನಂ. 216 ಕ್ಕೆ ಸಂಬಂಧಿಸಿದ ಮನೆ ಆಕಾರಣೆಯಾದಿಯಾಗಿದ್ದು, ಸದರಿ ದಾಖಲಾತಿಯಲ್ಲಿ ಹಾಲಪ್ಪ ಶಂಕ್ರಪ್ಪ ನಾಡಗೌಡರು ಮತ್ತು ಭೀಮನಗೌಡ ಹನಮಪ್ಪ

ನಾಡಗೌಡರು ಎಂದು ನಮೂದು ಆಗಿರುತ್ತದೆ. ನಿಪಿ.7 ವಿಪಿಸಿ ನಂ. 216 ಕ್ಕೆ ಸಂಬಂಧಿಸಿದ ಮನೆ ಆಕಾರಣೆಯಾದಿಯಾಗಿದ್ದು, ಸದರಿ ದಾಖಲಾತಿಯಲ್ಲಿ ಹಾಲಪ್ಪ ಶಂಕ್ರಪ್ಪ ನಾಡಗೌಡರು ಮತ್ತು ಭೀಮನಗೌಡ ಹನಮಪ್ಪ ನಾಡಗೌಡರು ಎಂದು ನಮೂದು ಆಗಿರುತ್ತದೆ. ನಿಪಿ.8 ವಿಪಿಸಿ ನಂ.31 ಕ್ಕೆ ಸಂಬಂಧಿಸಿದ ಮನೆ ಆಕಾರಣೆಯಾದಿಯಾಗಿದ್ದು, ಸದರಿ ದಾಖಲಾತಿಯಲ್ಲಿ ಭೀಮನಗೌಡ ಹನಮಪ್ಪ ನಾಡಗೌಡರು 4 ಜನರು ಎಂದು ನಮೂದು ಆಗಿರುತ್ತದೆ. ನಿಪಿ.9 ವಿಪಿಸಿ ನಂ.216 ಕ್ಕೆ ಸಂಬಂಧಿಸಿದ ಮನೆ ಆಕಾರಣೆಯಾದಿಯಾಗಿದ್ದು, ಸದರಿ ದಾಖಲಾತಿಯಲ್ಲಿ ಭೀಮನಗೌಡ ಹನಮಪ್ಪ ನಾಡಗೌಡರು ಎಂದು ನಮೂದು ಆಗಿರುತ್ತದೆ. ನಿಪಿ.10 ವಿಪಿಸಿ ನಂ.31 ಕ್ಕೆ ಸಂಬಂಧಿಸಿದ ಮನೆ ಆಕಾರಣೆಯಾದಿಯಾಗಿದ್ದು, ಸದರಿ ದಾಖಲಾತಿಯಲ್ಲಿ ಭೀಮನಗೌಡ ಹನಮಪ್ಪ ನಾಡಗೌಡರು ಎಂದು ನಮೂದು ಆಗಿರುತ್ತದೆ. ನಿಪಿ.13 ವಿಪಿಸಿ ನಂ.31 ಕ್ಕೆ ಸಂಬಂಧಿಸಿದ ಮನೆ ಆಕಾರಣೆಯಾದಿಯಾಗಿದ್ದು, ಸದರಿ ದಾಖಲಾತಿಯಲ್ಲಿ ಶಂಕ್ರಪ್ಪ ಹನಮಪ್ಪ ನಾಡಗೌಡರು ಎಂದು ನಮೂದು ಆಗಿರುತ್ತದೆ. ನಿಪಿ.14 ವಿಪಿಸಿ ನಂ.212 ಕ್ಕೆ ಸಂಬಂಧಿಸಿದ ಮನೆ ಆಕಾರಣೆಯಾದಿಯಾಗಿದ್ದು, ಸದರಿ ದಾಖಲಾತಿಯಲ್ಲಿ ಹನಮಪ್ಪ ಭೀಮಪ್ಪ ನಾಡಗೌಡರು ಎಂದು ನಮೂದು ಆಗಿರುತ್ತದೆ. ನಿಪಿ.12 ಗ್ರಾಮ ಪಂಚಾಯತಿ ಕಾರ್ಯಾಲಯ ಚಿಕ್ಕಮಣ್ಣೂರು ರವರು ವಿಪಿಸಿ ನಂ.31 ಹಾಗೂ ಖಾಲಿ ಜಾಗದ ನಂ.216 ರ 1972-73 ನೇ ಸಾಲಿನಲ್ಲಿ ನಮೂನೆ 9 ಪುಸ್ತಕದಲ್ಲಿ ಹಾಲಪ್ಪ ಶಂಕ್ರಪ್ಪ ನಾಡಗೌಡರ ಹೆಸರು ಇದ್ದುದ್ದನ್ನು ತೆಗೆದು ಹಾಕಿ ಭೀಮನಗೌಡ ಹನಮಪ್ಪ

ನಾಡಗೌಡರ ಎಂದು ದಾಖಲಾಗಿದ್ದು, ಅದರಲ್ಲಿ ಸರ್ವೆನಂಬರ್ ಹಾಗೂ ದಿನಾಂಕ ನಮೂದು ಆಗಿರುವುದಿಲ್ಲ. ಖರೀದಿ ವರದಿಯ ಪ್ರಕಾರ ದಾಖಲಾಗಿರುತ್ತದೆ ಎಂದು ನಮೂದಿಸಿರುವುದು ಕಂಡು ಬಂದಿರುತ್ತದೆ. ಅದೇ ರೀತಿಯಾಗಿ ಪ್ರತಿವಾದಿಯವರು ಸಹ ನಿಡಿ.2 ನೊಂದಣಿ ಖರೀದಿ ಪತ್ರವನ್ನು ಹಾಜರುಪಡಿಸಿದ್ದು, ಸದರಿ ಖರೀದಿ ಪತ್ರದಲ್ಲಿ ಚಿಕ್ಕಮಣ್ಣೂರು ಗ್ರಾಮದ ಬಯಲು ಜಾಗ ಮತ್ತು ಹಿತ್ತಲ ಜಾಗದ ಖರೀದಿ ಪತ್ರವು ಭೀಮನಗೌಡ ತಂದೆ ಹನಮಪ್ಪ ಗೌಡರವರಿಗೆ ಹಾಲಪ್ಪ ತಂದೆ ಶಂಕ್ರಪ್ಪ ನಾಡಗೌಡರು ಪಂಚಾಯತಿ ನಂ.31 ಅದರ ಚಕ್ಕುಬಂದಿ ಪೂರ್ವಕ್ಕೆ ವೀರಭದ್ರಪ್ಪ ರವರ ಮನೆ, ಪಶ್ಚಿಮಕ್ಕೆ ತಮ್ಮ ಮಾಲೀಕತ್ವದ ಜಾಗ, ಉತ್ತರಕ್ಕೆ ಸರಕಾರಿ ರಸ್ತೆ, ದಕ್ಷಿಣಕ್ಕೆ ತಮ್ಮ ಮಾಲೀಕತ್ವದ ಮನೆ ಎಂದು ನಮೂದು ಆಗಿರುತ್ತದೆ. ಸದರಿ ಜಾಗದ ಅಳತೆ ಪೂರ್ವ–ಪಶ್ಚಿಮ 16 ಅಡಿ, ಉತ್ತರ –ದಕ್ಷಿಣ 28 ಅಡಿ ಎಂದು ನಮೂದು ಆಗಿರುತ್ತದೆ. ಅದೇ ರೀತಿಯಾಗಿ ಸದರಿ ಗ್ರಾಮದ ಹಿತ್ತಲು ಜಾಗದ ಪಂಚಾಯತಿಯ ನಂ.216 ವಿಸ್ತೀರ್ಣ ಪೂರ್ವ–ಪಶ್ಚಿಮ 36 ಅಡಿ ಉತ್ತರ–ದಕ್ಷಿಣ 28 ಅಡಿ ಇರುತ್ತದೆ ಎಂದು ನಮೂದಿಸಿರುತ್ತಾರೆ. ಸದರಿ ಖರೀದಿ ಪತ್ರವನ್ನು ದಿನಾಂಕ 26.03.1974 ರಂದು ರೂ.1,000/– ಗಳಿಗೆ ಮಾಡಿಕೊಟ್ಟಿರುವುದು ಕಂಡು ಬಂದಿರುತ್ತದೆ. ಹಾಗೆಯೇ ನಿಡಿ.3 ವಿಪಿಸಿ ನಂ.31 ಕ್ಕೆ ಸಂಬಂಧಿಸಿದ 2005–06 ನೇ ಸಾಲಿನ ಮನೆ ಆಕಾರಣೆಯಾದಿಯಾಗಿದ್ದು, ಶಂಕ್ರಪ್ಪ ಹನಮಪ್ಪ ನಾಡಗೌಡರ ಹೆಸರಿನಲ್ಲಿ ಇರುತ್ತದೆ. ನಿಡಿ.4 ವಿಪಿಸಿ ನಂ.211 ಕ್ಕೆ ಸಂಬಂಧಿಸಿದ 2005–06 ನೇ ಸಾಲಿನ ಮನೆ

ಆಕಾರಣೆಯಾದಿಯಾಗಿದ್ದು, ಭೀಮನಗೌಡ ಹನಮಪ್ಪ ನಾಡಗೌಡರ ಹೆಸರಿನಲ್ಲಿ ಇರುತ್ತದೆ. ನಿಡಿ.5 ವಿಪಿಸಿ ನಂ.31 ಕ್ಕೆ ಸಂಬಂಧಿಸಿದ 2018-19 ನೇ ಸಾಲಿನ ಮನೆ ಆಕಾರಣೆಯಾದಿಯಾಗಿದ್ದು, ಶಂಕ್ರಪ್ಪ ಹನಮಪ್ಪ ನಾಡಗೌಡರ ಹೆಸರಿನಲ್ಲಿ ಇರುತ್ತದೆ. ನಿಡಿ.6 ವಿಪಿಸಿ ನಂ.211 ಕ್ಕೆ ಸಂಬಂಧಿಸಿದ 2018-19 ನೇ ಸಾಲಿನ ಮನೆ ಆಕಾರಣೆಯಾದಿಯಾಗಿದ್ದು, ಭೀಮನಗೌಡ ಹನಮಪ್ಪ ನಾಡಗೌಡರ ಹೆಸರಿನಲ್ಲಿ ಇರುತ್ತದೆ.

**13.** ವಾದಿಯವರು ಪ್ರಸ್ತುತ ವಿವಾದಾಂಶಕ್ಕೆ ಸಂಬಂಧಿಸಿದಂತೆ ಹಾಜರುಪಡಿಸಿರುವ ದಾಖಲಾತಿಗಳ ಪೈಕಿ ನಿಪಿ.4 ಮಾತ್ರ ವಾದಿಯವರ ತಂದೆಯವರ ಹೆಸರು ಇರುತ್ತದೆ. ನಂತರದ ದಾಖಲಾತಿಗಳಾದ ನಿಪಿ.5 ರಿಂದ 11, 13 ಮತ್ತು 14 ಪ್ರತಿವಾದಿಯವರ ಹೆಸರಿನಲ್ಲಿ ಇರುವುದು ಸ್ಪಷ್ಟವಾಗಿ ಕಂಡು ಬಂದಿರುತ್ತದೆ. ನಿಡಿ.2 ನೊಂದಣಿ ಖರೀದಿ ಪತ್ರವಾಗಿದ್ದು ಸದರಿ ಖರೀದಿ ಪತ್ರವನ್ನು ವಾದಿಯವರು ದಿನಾಂಕ 26.03.1974 ರಂದು ಮಾಡಿಕೊಟ್ಟಿರುತ್ತಾರೆ ಎಂದು ನಮೂದು ಆಗಿರುತ್ತದೆ. ನಿಪಿ.12 ರಲ್ಲಿ 1972 ರಲ್ಲಿ ಖರೀದಿ ವರದಿಯ ಆಧಾರದ ಮೇಲೆ ವಾದಿಯವರ ತಂದೆಯವರ ಹೆಸರನ್ನು ತೆಗೆದು ಹಾಕಿ ಭೀಮನಗೌಡ ಹನಮಪ್ಪ ನಾಡಗೌಡರು ಎಂದು ನಮೂದಿಸಿರುತ್ತೇವೆ ಎಂದು ನಮೂದು ಮಾಡಿರುತ್ತಾರೆ. ಆದರೆ ವಾದಿಯವರು ಸದರಿ ದೃಢಿಕರಣ ಪತ್ರದಲ್ಲಿ 1972-73 ನೇ ಸಾಲಿನ ನಮೂನೆ 9 ಬುಕ್ ನಲ್ಲಿ ಹಾಲಪ್ಪ ಶಂಕ್ರಪ್ಪ ನಾಡಗೌಡರ ಹೆಸರು ತೆಗೆದು ಹಾಕಿ ಭೀಮನಗೌಡ ರವರ ಹೆಸರು ನಮೂದಿಸಿರುತ್ತೇವೆ ಎಂದು ಹೇಳಿರುತ್ತಾರೆ. ಆದರೆ ವಾದಿಯವರು ಸದರಿ

ನಮೂನೆ 9 ಪುಸ್ತಕವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ. ವಾದಿ ಪರ ವಕೀಲರು ತಮ್ಮ ಮೌಖಿಕ ವಾದದಲ್ಲಿ ಖರೀದಿ ಪತ್ರಕ್ಕಿಂತ ಪೂರ್ವದಲ್ಲಿ ಗ್ರಾಮ ಪಂಚಾಯತಿ ದಾಖಲಾತಿಗಳಲ್ಲಿ ಭೀಮನಗೌಡ ಹನಮಪ್ಪ ನಾಡಗೌಡ ರವರ ಹೆಸರು ದಾಖಲಾಗಿರುತ್ತದೆ. ಹಾಗಾಗಿ ಸದರಿ ಖರೀದಿ ಪತ್ರವು ನಕಲಿಯಾಗಿರುತ್ತದೆ ಎಂದು ತಮ್ಮ ಮೌಖಿಕ ವಾದವನ್ನು ಮಂಡಿಸಿರುತ್ತಾರೆ. ಸದರಿ ನಿಪಿ.12 ದೃಢಿಕರಣ ಪತ್ರದ ಆಧಾರದ ಮೇಲೆ ನೊಂದಣಿ ಖರೀದಿ ಪತ್ರವನ್ನು ನಕಲಿ ಎನ್ನಲು ಬರುವುದಿಲ್ಲ. ಹಾಗೆಯೇ ವಾದಿ ಸಾಕ್ಷಿ 1 ರವರು ತಮ್ಮ ಪಾಟೀ ಸವಾಲಿನಲ್ಲಿ 1974 ರಲ್ಲಿ ತನಗೆ ಅಂದಾಜು 28-29 ವರ್ಷ ವಯಸ್ಸು ಆಗಿತ್ತು ಎಂದರೆ ಆಗಿರಿಬಹುದು ಎಂದು ನುಡಿದಿರುತ್ತಾರೆ. ನಿಪಿ.4 ರಿಂದ 11 ದಾಖಲಾತಿಗಳನ್ನು ನೋಡುತ್ತಿದ್ದೇನೆ ಅವುಗಳನ್ನು ತಾನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. 1974 ರಿಂದ ಇಲ್ಲಿಯವರೆಗೆ 1 ನೇ ಪ್ರತಿವಾದಿಯ ಹೆಸರು ನಿಪಿ.4 ರಿಂದ 11 ರಲ್ಲಿ ದಾಖಲು ಆಗಿದೆ ಎಂದರೆ ಸರಿಯಲ್ಲ. 1974 ರಿಂದ ಇಲ್ಲಿಯವೆರೆಗೆ ಆ ಖರೀದಿ ಪತ್ರವನ್ನು ತಾನು ಎಲ್ಲಿಯು ಪ್ರಶ್ನೆ ಮಾಡಿಲ್ಲಾ, ಸಾಕ್ಷಿಯು ಮುಂದುವರಿದು ತಾನು ಪ್ರತಿವಾದಿಗಳಿಗೆ ಆಗಲೇ ಕೇಳಿದ್ದೆ, ಅವರು ಹೊಡಿಬಡಿ ಮಾಡಿ ಊರಿಂದ ಹೊರಗೆ ಹಾಕಿ ದೌರ್ಜನ್ಯ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ನಿಪಿ.12 ದೃಢಿಕರಣ ಪತ್ರವನ್ನು ತಾನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ನಿಪಿ.1 ರಿಂದ 3 ಋಣಬಾರ ರಾಹಿತ್ಯ ಪ್ರಮಾಣ ಪತ್ರವನ್ನು ಯಾರು ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ ಎಂದು ತನಗೆ ಮಾಹಿತಿ ಇಲ್ಲಾ. ತಾನು ನಿಪಿ.1 ರಿಂದ

3 ದಾಖಲಾತಿಗಳನ್ನು ಪಡೆದುಕೊಂಡಿರುವುದಿಲ್ಲ ಎಂದು ನುಡಿದಿರುತ್ತಾರೆ. ವಾದಿಯವರು ತಮ್ಮ ಪಾಟೀ ಸವಾಲಿನಲ್ಲಿ ತಮ್ಮ ವಾದ ಪತ್ರದಲ್ಲಿ ಹೇಳಿರುವ ಸಂಗತಿಗಳಿಗೆ ಸಂಬಂಧಿಸಿದಂತೆ ವಿರುದ್ಧವಾಗಿ ನುಡಿದಿರುತ್ತಾರೆ ಅಲ್ಲದೇ ತಾನು ಹಾಜರುಪಡಿಸಿ ಗುರುತಿಸಿಕೊಂಡಿರುವ ದಾಖಲಾತಿಗಳನ್ನು ಸಹ ನ್ಯಾಯಾಲಯಕ್ಕೆ ತಾನು ಹಾಜರುಪಡಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಸದರಿ ಸಂಗತಿಗಳನ್ನು ಗಮನಿಸಿದಾಗ ವಾದಿಯವರ ದಾವೆಯ ಮೇಲೆ ಅನುಮಾನ ಉಂಟಾಗುತ್ತದೆ. ವಾದಿಯವರು ತಮ್ಮ ವಾದ ಪತ್ರದಲ್ಲಿ ತನ್ನ ತಂದೆಯವರು ನಿಧನರಾದಗ ತನಗೆ 12-13 ವರ್ಷಗಳ ಇದ್ದವು ಎಂದು ನಮೂದಿಸಿರುತ್ತಾರೆ. ಆದರೆ ಪಾಟೀ ಸವಾಲಿನಲ್ಲಿ 1974 ನೇ ಇಸ್ವಿಯಲ್ಲಿ 28-29 ವಯಸ್ಸು ಇರಬಹುದು ಎಂದು ನುಡಿದಿರುತ್ತಾರೆ. ವಾದಿಯವರು ನಿಪಿ.1 ರಿಂದ 3 ದಾಖಲಾತಿಗಳನ್ನು ಹಾಜರುಪಡಿಸಿ ವಿಪಿಸಿ ನಂ.31 ಮತ್ತು 216 ಕ್ಕೆ ಸಂಬಂಧಿಸಿದಂತೆ ನೊಂದಣಿ ಕಚೇರಿಯಲ್ಲಿ 1950 ರಿಂದ 2017 ರ ವರೆಗೆ ಯಾವುದೇ ದಾಖಲಾತಿಗಳು ಸಿಕ್ಕಿರುವುದಿಲ್ಲ ಎಂದು ತೋರಿಸಲು ಸ್ವತ್ತಿನ ಮೇಲಿನ ಋಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತಾರೆ. ಸದರಿ ದಾಖಲಾತಿಗಳ ಆಧಾರದ ಮೇಲೆ ನೊಂದಣಿ ಖರೀದಿ ಪತ್ರವಾಗಿರುವುದಿಲ್ಲ ಎಂದು ಅಲ್ಲಗಳೆಯಲು ಬರುವುದಿಲ್ಲ. ಸದರಿ ದಾಖಲಾತಿಗಳನ್ನು ವಾದಿ ಸಾಕ್ಷಿ 1 ರವರು ತಮ್ಮ ಪಾಟೀ ಸವಾಲಿನಲ್ಲಿ ತಾನು ಸದರಿ ದಾಖಲಾತಿಗಳನ್ನು ತಾನು ಹಾಜರುಪಡಿಸಿರುವುದಿಲ್ಲ ಮತ್ತು ತಾನು ಪಡೆದುಕೊಂಡಿರುವುದಿಲ್ಲ ಎಂದು ನುಡಿದಿರುತ್ತಾರೆ. ನೊಂದಣಿ ಖರೀದಿ ಪತ್ರವು ಸಾರ್ವಜನಿಕ

ಕಚೇರಿಯಲ್ಲಿ ಆಗಿರುವುದರಿಂದ ಹಾಗೂ ನೊಂದಣಿಯಾಗಿರುವುದರಿಂದ ನಂಬುವಂತಹ ದಾಖಲಾತಿಯಾಗಿರುತ್ತದೆ. ವಾದಿಯವರು ಪ್ರಸ್ತುತ ವಿವಾದಾಂಶಕ್ಕೆ ಸಂಬಂಧಿಸಿದಂತೆ ಮಾಲೀಕನಾಗಿದ್ದುಕೊಂಡು ಸ್ವಾ ಧೀನದಲ್ಲಿ ಇರುತ್ತೇನೆ ಎಂದು ಸಾಬೀತುಪಡಿಸಲು ವಿಫಲರಾಗಿರುತ್ತಾರೆ ಎಂದು ಸ್ಪಷ್ಟವಾಗಿ ಕಂಡು ಬಂದಿರುತ್ತದೆ. ವಾದಿಯವರು ಹಾಜರುಪಡಿಸಿರುವ ಮೌಖಿಕ, ದಾಖಲಾತಿ ಸಾಕ್ಷ್ಯ ಮತ್ತು ಉಭಯ ಪಕ್ಷಗಾರರ ವಾದದ ಆಧಾರದ ಮೇಲೆ ಮತ್ತು ಈ ಮೇಲ್ಕಂಡಂತೆ ಚರ್ಚಿಸಿದ ಸಂಗತಿಗಳ ಆಧಾರದ ಮೇಲೆ ವಿವಾದಾಂಶ ಸಂಖ್ಯೆ 1 ನ್ನು ನಕಾರಾತ್ಮಕವಾಗಿ ಉತ್ತರಿಸುತ್ತಿದ್ದೇನೆ.

14. <u>**ವಿವಾದಾಂಶ ಸಂಖ್ಯೆ 2ಃ-**</u> ಪ್ರಸ್ತುತ ವಿವಾದಾಂಶಕ್ಕೆ ಸಂಬಂಧಿಸಿದಂತೆ ಪ್ರತಿವಾದಿಯವರು ತಮ್ಮ ಸ್ವಾಧೀನಕ್ಕೆ ಅಡ್ಡಿಪಡಿಸಿರುತ್ತಾರೆ ಎಂದು ಹೇಳಿರುತ್ತಾರೆ. ಸದರಿ ಸಂಗತಿಯನ್ನು ವಾದಿಯವರು ಹೇಳಿರುವುದರಿಂದ ಸದರಿ ವಿವಾದಾಂಶವನ್ನು ಸಾಬೀತುಪಡಿಸುವ ಹೊಣೆಗಾರಿಕೆ ವಾದಿಯವರ ಮೇಲೆ ಇರುತ್ತದೆ. ವಾದಿಯವರು ತಾವು ಸ್ವಾಧೀನದಲ್ಲಿ ಇದ್ದೇವೆ ಎಂದು ತೋರಿಸಲು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ದಾವಾ ಆಸ್ತಿಯು ಚಿಕ್ಕಮಣ್ಣೂರು ಗ್ರಾಮದಲ್ಲಿ ಇರುತ್ತದೆ. ವಾದಿ ಸಾಕ್ಷಿ 1 ರವರು ತಮ್ಮ ಪಾಟೀ ಸವಾಲಿನಲ್ಲಿ ತಾನು ಯಾವತ್ತು ಚಿಕ್ಕಮಣ್ಣೂರು ಗ್ರಾಮದಲ್ಲಿ ವಾಸವಾಗಿಲ್ಲಾ ಎಂದರೆ ನಿಜ. ತಾನು ಈಗ ಕುಕನೂರಿನಲ್ಲಿ ವಾಸವಾಗಿದ್ದೇನೆ ಎಂದು ನುಡಿದಿರುತ್ತಾರೆ. ಸದರಿ ಸಂಗತಿಯನ್ನು ಗಮನಿಸಿದಾಗ ವಾದಿಯವರು ಚಿಕ್ಕಮಣ್ಣೂರು

ಗ್ರಾಮದಲ್ಲಿ ವಾಸವಾಗಿರುವುದಿಲ್ಲ ಮತ್ತು ದಾವಾ ಆಸ್ತಿಯ ಸ್ವಾಧೀನದಲ್ಲಿ ಇರುವುದಿಲ್ಲ ಎನ್ನುವುದು ಸ್ಪಷ್ಟವಾಗಿ ಕಂಡು ಬಂದಿರುತ್ತದೆ. ವಾದಿಯವರು ದಾವಾ ಆಸ್ತಿಯ ಮಾಲೀಕರಾಗಿರುತ್ತೇವೆ ಎನ್ನುವ ಸಂಗತಿಯನ್ನು ಸಾಬೀತುಪಡಿಸಲು ವಿಫಲರಾಗಿರುತ್ತಾರೆ. "**ಮಾಲೀಕತ್ವವು ಸ್ವಾಧೀನವನ್ನು ಹಿಂಬಾಲಿಸುತ್ತದೆ. ಸ್ವಾಧೀನವು ಮಾಲೀಕತ್ವವನ್ನು ಹಿಂಬಾಲಿಸುವುದಿಲ್ಲ.**" ಸದರಿ ತತ್ವವನ್ನು ಗಮನಿಸಿದಾಗ ವಾದಿಯವರು ದಾವಾ ಆಸ್ತಿಯ ಮಾಲೀಕರಾಗಿರುವುದಿಲ್ಲ. ಹಾಗಾಗಿ ಸ್ವಾಧೀನದಲ್ಲಿ ಇರುವುದಿಲ್ಲ ಎನ್ನುವುದು ಸ್ಪಷ್ಟವಾಗಿ ತಿಳಿದು ಬಂದಿರುತ್ತದೆ. ಅದೇ ರೀತಿಯಾಗಿ ವಾದಿಯವರು ಹಾಜರುಪಡಿಸಿರುವ ಮನೆ ಆಕಾರಣೆಯಾದಿಗಳು ಪ್ರತಿವಾದಿಯವರ ಹೆಸರಿನಲ್ಲಿ ಇರುವುದು ಸ್ಪಷ್ಟವಾಗಿ ಕಂಡು ಬಂದಿರುತ್ತದೆ. ವಾದಿಯವರು ತಾನು ಯಾವತ್ತು ಚಿಕ್ಕಮಣ್ಣೂರು ಗ್ರಾಮದಲ್ಲಿ ವಾಸವಾಗಿರುವುದಿಲ್ಲ ಎನ್ನುವ ಸಂಗತಿಯನ್ನು ಗಮನಿಸಿದಾಗ ವಾದಿಯವರು ದಾವಾ ಆಸ್ತಿಯ ಸ್ವಾಧೀನದಲ್ಲಿ ಇರುವುದಿಲ್ಲ ಎನ್ನುವುದು ಸ್ಪಷ್ಟವಾಗಿ ಕಂಡು ಬಂದಿರುತ್ತದೆ. ಹಾಗಾಗಿ ಪ್ರತಿವಾದಿಯವರು ವಾದಿಯವರಿಗೆ ತೊಂದರೆ ನೀಡುವ ಪ್ರಸಂಗವೇ ಉದ್ಭವಾಗುವುದಿಲ್ಲ. ಈ ಮೇಲ್ಕಂಡಂತೆ ಚರ್ಚಿಸಿಂದ ಸಂಗತಿಗಳ ಆಧಾರದ ಮೇಲೆ ವಿವಾದಾಂಶ ಸಂಖ್ಯೆ 2 ನ್ನು ನಕಾರಾತ್ಮಕವಾಗಿ ಉತ್ತರಿಸುತ್ತಿದ್ದೇನೆ.

**15.**<u>**ವಿವಾದಾಂಶ ಸಂಖ್ಯೆ 3ಃ**</u>- ಪ್ರಸ್ತುತ ವಿವಾದಾಂಶಕ್ಕೆ ಸಂಬಂಧಿಸಿದಂತೆ ವಾದಿಯವರು ದಾವೆಯಲ್ಲಿ ಘೋಷಣಾತ್ಮಕ ಪರಿಹಾರವನ್ನು ಕೇಳಿರುತ್ತಾರೆ. ವಾದಿಯವರು

ವಿವಾದಾಂಶ ಸಂಖ್ಯೆ 1 ನ್ನು ಸಾಬೀತುಪಡಿಸಲು ವಿಫಲರಾಗಿರುವುದರಿಂದ ಪ್ರಸ್ತುತ ದಾವೆಯಲ್ಲಿ ಕೇಳಿರುವ ಘೋಷಣಾತ್ಮಕ ಪರಿಹಾರವನ್ನು ಪಡೆದುಕೊಳ್ಳಲು ಬರುವುದಿಲ್ಲ. ಹಾಗಾಗಿ ವಿವಾದಾಂಶ ಸಂಖ್ಯೆ 3 ನ್ನು ನಕಾರಾತ್ಮಕವಾಗಿ ಉತ್ತರಿಸುತ್ತಿದ್ದೇನೆ.

**16. <u>ವಿವಾದಾಂಶ ಸಂಖ್ಯೆ 4ಃ</u>**– ಪ್ರಸ್ತುತ ವಿವಾದಾಂಶಕ್ಕೆ ಸಂಬಂಧಿಸಿದಂತೆ ವಾದಿಯವರು ದಾವೆಯಲ್ಲಿ ಶಾಶ್ವತ ನಿರ್ಭಂದಕಾಜ್ಞೆಯ ಪರಿಹಾರವನ್ನು ಕೇಳಿರುತ್ತಾರೆ. ವಾದಿಯವರು ವಿವಾದಾಂಶ ಸಂಖ್ಯೆ 2 ನ್ನು ಸಾಬೀತುಪಡಿಸಲು ವಿಫಲರಾಗಿರುವುದರಿಂದ ಪ್ರಸ್ತುತ ದಾವೆಯಲ್ಲಿ ಕೇಳಿರುವ ಶಾಶ್ವತ ನಿರ್ಭಂದಕಾಜ್ಞೆಯ ಪರಿಹಾರವನ್ನು ಪಡೆದುಕೊಳ್ಳಲು ಬರುವುದಿಲ್ಲ. ಹಾಗಾಗಿ ವಿವಾದಾಂಶ ಸಂಖ್ಯೆ 4 ನ್ನು ನಕಾರಾತ್ಮಕವಾಗಿ ಉತ್ತರಿಸುತ್ತಿದ್ದೇನೆ.

**17. <u>ವಿವಾದಾಂಶ ಸಂಖ್ಯೆ 5ಃ</u>**– ಪ್ರಸ್ತುತ ವಿವಾದಾಂಶಕ್ಕೆ ಸಂಬಂಧಿಸಿದಂತೆ ಪ್ರತಿವಾದಿಯವರು ತಮ್ಮ ಪ್ರತಿವಾದ ಪತ್ರದಲ್ಲಿ ದಾವೆಯು ಕಾಲಪರಿಮಿತಿ ಅಧಿನಿಯಮದ ಅಡಿಯಲ್ಲಿ ಪರಿಷೇದಿತವಾಗಿದೆ ಎಂದು ಹೇಳಿರುತ್ತಾರೆ. ಸದರಿ ಖರೀದಿ ಪತ್ರವವು ದಿನಾಂಕ 26.03.1974 ರಂದು ಆಗಿರುತ್ತದೆ. ವಾದಿ ಸಾಕ್ಷ್ಯ 1 ರವರು ತಮ್ಮ ಪಾಟೀ ಸವಾಲಿನಲ್ಲಿ 1974 ರಿಂದ ಇಲ್ಲಿಯವರೆಗೆ ಆ ಖರೀದಿ ಪತ್ರವನ್ನು ತಾನು ಎಲ್ಲಿಯು ಪ್ರಶ್ನೆ ಮಾಡಿರುವುದಿಲ್ಲ. ಸಾಕ್ಷಿಯು ಮುಂದುವರಿದು ತಾನು ಪ್ರತಿವಾದಿಗಗಳಿಗೆ ಆಗಲೇ ಕೇಳಿದ್ದೆ ಅವರು ಹೊಡಿಬಡಿ ಮಾಡಿ ಊರಿಂದ ಹೊರಗೆ ಹಾಕಿ ದೌರ್ಜನ್ಯ ಮಾಡಿರುತ್ತಾರೆ ಎಂದು ಹೇಳಿರುತ್ತಾರೆ. ಯಾವ ದಿನಾಂಕದಂದು ಪ್ರತಿವಾದಿಗೆ ಹೇಳಿದ್ದೆ ಎಂದರೆ ತನಗೆ ನೆನಪು ಇಲ್ಲಾ

ಎಂದು ನುಡಿದಿರುತ್ತಾರೆ. ಸದರಿ ಸಂಗತಿಯನ್ನು ಗಮನಿಸಿದಾಗ ವಾದಿಯವರಿಗೆ ಸದರಿ ಖರೀದಿ ಪತ್ರದ ಬಗ್ಗೆ ಮಾಹಿತಿ ಇತ್ತು ಎನ್ನುವುದು ಸ್ಪಷ್ಟವಾಗಿ ಕಂಡು ಬಂದಿರುತ್ತದೆ. ನೊಂದಣಿ ಖರೀದಿ ಪತ್ರವನ್ನು ಮತ್ತು ಮೋಸದಿಂದ ಮಾಡಿಕೊಂಡಿರುವ ದಾಖಲಾತಿಗಳನ್ನು 3 ವರ್ಷದ ಒಳಗಾಗಿ ಪ್ರಶ್ನೆ ಮಾಡಬೇಕಾಗುತ್ತದೆ. ಆದರೆ ವಾದಿಯವರು ಸದರಿ ಖರೀದಿ ಪತ್ರಕ್ಕೆ ಸಂಬಂಧಿಸಿದಂತೆ ಎಲ್ಲಿಯು 2018 ರ ವರೆಗೆ ಪ್ರಶ್ನೆಯನ್ನು ಮಾಡದೇ ದಾವೆಯನ್ನು ದಾಖಲಿಸಿರುತ್ತಾರೆ. ವಾದಿಯು ತಮ್ಮ ಪಾಟೀ ಸವಾಲಿನಲ್ಲಿ ತಾನು ಪ್ರತಿವಾದಿಗಳಿಗೆ ಆಗಲೇ ಕೇಳಿದ್ದೆ ಎಂದು ಹೇಳಿರುವುದನ್ನು ಗಮನಿಸಿದಾಗ ಸದರಿ ವಾದಿಯವರಿಗೆ ಖರಿದಿ ಪತ್ರದ ಬಗ್ಗೆ ಮಾಹಿತಿ ಇತ್ತು ಎನ್ನುವುದು ಸ್ಪಷ್ಟವಾಗಿ ಕಂಡು ಬಂದಿರುತ್ತದೆ ಮತ್ತು ಯಾವ ವರ್ಷ ತಾನು ಪ್ರತಿವಾದಿಗಳಿಗೆ ಹೇಳಿದ್ದೆ ಎನ್ನುವುದನ್ನು ಹೇಳಬೇಕಾಗಿತ್ತು ಆದರೆ ಇದು ಯಾವ ಪ್ರಯತ್ನವನ್ನು ಸಹ ವಾದಿಯವರು ಮಾಡಿರುವುದಿಲ್ಲ. ಹಾಗೆಯೇ ಪ್ರತಿವಾದಿಯವರು ತಮ್ಮ ಮೌಖಿಕ ವಾದದ ಸಮಯದಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಪ್ರಕಾರಣಾದ 1. AIR 2022 SC 2707 Rajpal Singh V/s Saroja and Lrs. ಮತ್ತು ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದ ಪ್ರಕರಣವಾದ Shettappa V/s Parappa and others. ಪ್ರಕರಣಗಳನ್ನು ಉಲ್ಲೇಖಿಸಿ ವಾದವನ್ನು ಮಂಡಿಸಿರುತ್ತಾರೆ. ಸದರಿ ಗೌರವಾನ್ವಿತ ನ್ಯಾಯಾಲಯದ ಪ್ರಕರಣಗಳನ್ನು ಕೂಲಂಕುಶವಾಗಿ ಪರಿಶೀಲಿಸಿ ನೋಡಿದಾಗ ಸದರಿ ಪ್ರಕರಣಕ್ಕೆ ಅನ್ವಯಿಸುತ್ತದೆ ಎನ್ನುವುದು ಕಂಡು ಬಂದಿರುತ್ತದೆ. ಹಾಗಾಗಿ ದಾವೆಯು

ಕಾಲಪರಿಮಿತಿ ಅಧಿನಿಯಮದ ಅಡಿಯಲ್ಲಿ ಪರಿಷೇದಿತವಾಗಿರುತ್ತದೆ ಎನ್ನುವುದರಲ್ಲಿ ಯಾವುದೇ ಅನುಮಾನ ಇರುವುದಿಲ್ಲ. ಹಾಗಾಗಿ ವಿವಾದಾಂಶ ಸಂಖ್ಯೆ 5 ನ್ನು ಸಕರಾತ್ಮಕವಾಗಿ ಉತ್ತರಿಸುತ್ತಿದ್ದೇನೆ.

**18. <u>ವಿವದಾಂಶ ಸಂಖ್ಯೆ 6ಃ-</u> ವಿವಾದಾಂಶ** ಸಂಖ್ಯೆ 1 ರಿಂದ 5 ರಲ್ಲಿ ಮಾಡಿರುವ ಚರ್ಚೆಗಳ ಆಧಾರದ ಮೇಲೆ ಈ ನ್ಯಾಯಾಲಯ ಈ ಕೆಳಗಿನಂತೆ ಆದೇಶ ಮಾಡಿರುತ್ತದೆ.

## ಆದೇಶ

**ವಾದಿಯ ದಾವೆಯನ್ನು ವೆಚ್ಚ ಸಹಿತ ತಿರಸ್ಕರಿಸಲಾಗಿದೆ.**

**ತೀರ್ಪಿನಂತೆ ಡಿಕ್ರಿ ಬರೆಯಿರಿ.**

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನ ನೀಡಿ, ಅವರು ಬೆರಳಚ್ಚು ಮಾಡಿದ ಮೇಲೆ ತಿದ್ದುಪಡಿಗಳನ್ನು ಪರಿಶೀಲಿಸಿ ದಿನಾಂಕ 10 ನೇ ಜೂನ್ 2026 ರಂದು ತೆರೆದ ನ್ಯಾಯಾಲಯದಲ್ಲಿ ತೀರ್ಪನ್ನು ಉಚ್ಚರಿಸಿದ್ದೇನೆ.)

**(ಶ್ರೀ. ವಿಜಯಕುಮಾರ. ಎನ್ )**
ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ರೋಣ.

## ಅನುಸೂಚಿ

**<u>ವಾದಿಯ ಪರವಾಗಿ ವಿಚಾರಣೆಗೆ ಒಳಪಡಿಸಿದ ಸಾಕ್ಷಿದಾರರ ಪಟ್ಟಿ:</u>**

ವಾದಿ ಪರ ಸಾಕ್ಷಿ 1 – ಹಾಲಪ್ಪ ಶಂಕ್ರಪ್ಪ ನಾಡಗೌಡ್ರ.

**<u>ವಾದಿಗಳ ಪರವಾಗಿ ಗುರುತಿಸಲಾದ ದಾಖಲೆಗಳು :</u>**

ನಿಪಿ-1-3 – ಋಣಭಾರ ರಾಹಿತ್ಯ ಪ್ರಮಾಣ ಪತ್ರಗಳು

ನಿಪಿ–4 – ಚಿಕ್ಕಮಣ್ಣೂರ ಗ್ರಾಮದ ವಿಪಿಸಿ ನಂ.203 ಆಸ್ತಿಯ ಉತಾರ

ನಿಪಿ–5 – ಚಿಕ್ಕಮಣ್ಣೂರ ಗ್ರಾಮದ ವಿಪಿಸಿ ನಂ.31 ಆಸ್ತಿಯ ಉತಾರ

ನಿಪಿ–6 – ಚಿಕ್ಕಮಣ್ಣೂರ ಗ್ರಾಮದ ವಿಪಿಸಿ ನಂ.216 ಆಸ್ತಿಯ ಉತಾರ

ನಿಪಿ–7 – ಚಿಕ್ಕಮಣ್ಣೂರ ಗ್ರಾಮದ ವಿಪಿಸಿ ನಂ.216 ಆಸ್ತಿಯ ಉತಾರ

ನಿಪಿ–8 – ಚಿಕ್ಕಮಣ್ಣೂರ ಗ್ರಾಮದ ವಿಪಿಸಿ ನಂ.31 ಆಸ್ತಿಯ ಉತಾರ

ನಿಪಿ–9 – ಚಿಕ್ಕಮಣ್ಣೂರ ಗ್ರಾಮದ ವಿಪಿಸಿ ನಂ.216 ಆಸ್ತಿಯ ಉತಾರ

ನಿಪಿ–10 – ಚಿಕ್ಕಮಣ್ಣೂರ ಗ್ರಾಮದ ವಿಪಿಸಿ ನಂ.31 ಆಸ್ತಿಯ ಉತಾರ

ನಿಪಿ–11 – ಚಿಕ್ಕಮಣ್ಣೂರ ಗ್ರಾಮದ ವಿಪಿಸಿ ನಂ.31 ಆಸ್ತಿಯ ಉತಾರ

ನಿಪಿ–12 – ದೃಢೀಕರಣ ಪತ್ರ

ನಿಪಿ–13 – ಚಿಕ್ಕಮಣ್ಣೂರ ಗ್ರಾಮದ ವಿಪಿಸಿ ನಂ.31 ಆಸ್ತಿಯ ಉತಾರ

ನಿಪಿ–14 – ಚಿಕ್ಕಮಣ್ಣೂರ ಗ್ರಾಮದ ವಿಪಿಸಿ ನಂ.212 ಆಸ್ತಿಯ ಉತಾರ.

**ಪ್ರತಿವಾದಿಯ ಪರವಾಗಿ ವಿಚಾರಣೆಗೆ ಒಳಪಡಿಸಿದ ಸಾಕ್ಷಿದಾರರ ಪಟ್ಟಿ** :

ಪ್ರತಿವಾದಿ ಪರ ಸಾಕ್ಷಿ 1– ಮಲ್ಲನಗೌಡ ಚನ್ನಬಸನಗೌಡ ನಾಡಗೌಡ್ರ

**ಪ್ರತಿವಾದಿಗಳ ಪರವಾಗಿ ಗುರುತಿಸಲಾದ ದಾಖಲೆಗಳು** :

ನಿಡಿ–1 – ವಿಶೇಷ ಅಧಿಕಾರ ಪತ್ರ

ನಿಡಿ–2 – ದಿ.26.03.1974 ರ ಮೂಲ ಖರೀದಿ ಪತ್ರ

ನಿಡಿ–3 – ಚಿಕ್ಕಮಣ್ಣೂರ ಗ್ರಾಮದ ಆಸ್ತಿ ನಂ.31 ರ ಅಸಸ್ಸಮೆಂಟ್ ಎಕ್ಸಟ್ರ್ಯಾಕ್ಟ

ನಿಡಿ–4 – ಚಿಕ್ಕಮಣ್ಣೂರ ಗ್ರಾಮದ ಆಸ್ತಿ ನಂ.211 ರ ಅಸಸ್ಸಮೆಂಟ್ ಎಕ್ಸಟ್ರ್ಯಾಕ್ಟ

ನಿಡಿ–5 – ಚಿಕ್ಕಮಣ್ಣೂರ ಗ್ರಾಮದ ಆಸ್ತಿ ನಂ.31 ರ 2018–19 ರಿಂದ 2023–24 ರ ಅಸಸ್ಸಮೆಂಟ್ ಎಕ್ಸಟ್ರ್ಯಾಕ್ಟ

ನಿಡಿ–6 – ಚಿಕ್ಕಮಣ್ಣೂರ ಗ್ರಾಮದ ಆಸ್ತಿ ನಂ.211 ರ 2018–19 ರಿಂದ 2023–24 ರ ಅಸಸ್ಸಮೆಂಟ್ ಎಕ್ಸಟ್ರ್ಯಾಕ್ಟ.

**ಹೆಚ್ಚುವರಿ ದಿವಾಣಿ ನ್ಯಾಯಧೀಶರು ಹಾಗೂ**

**ಜೆ.ಎಂ.ಎಫ್.ಸಿ., ರೋಣ.**